ಪದಬಂಧ




ಎಡದಿಂದ ಬಲಕ್ಕೆ:

1. ಆರಂಭದಲ್ಲಿ ಎಲ್ಲವೂ ಹಾಗೆಯೇ, ಭಾರೀ ಜೋಕು (3)
3. ಬಿಸಿ ಏರಿದ್ದೇ ಆದರೆ ದಕ್ಷಿಣದ ಗಂಗೆಯ ಹೆಸರು? (3)
4. ಹಾಳಾಯಿತೇ? ಹೋಗಲಿ ಬಿಡಿ, ಅದು ಈಗಿನದ್ದಲ್ಲ (3)
6, ಪನ್ನೀರೆಲೆ ತೋಟ ಇರುವುದು ಬೇರೆಯವರ ಸ್ಥಳ (4)
7. ಅರಮನೆಗೇ ಇರಬೇಕು, ಆನೆಗಳು ಬಂದದ್ದು (4)
9. ತಂಡದವರೆಲ್ಲ ಸಾಲುಗಟ್ಟಿ ವೀಕ್ಷಿಸಿದ್ದು ಒಂದು ಜಲಪಾತ (4)
11. ಜನಾದರಣೆಗೆ ಕಾರಣ 'ಅರಿವಿನ ಐಶ್ವರ್ಯ' (4)
15. ಪಟೇಲನ ಸ್ಥಾನವೇ ಬದಲಾವಣೆ ಗೊಂಡಿದೆ (3)
16. ಒಳ್ಳೆಯದೇ ಆಯಿತು ಬಂದದ್ದು ಆಕೆಯ ಗಂಡ (3)
17. ಪರಿಹಾರ ಸಾಮಗ್ರಿ ಸಂಗ್ರಹಕ್ಕೆ ಭದ್ರ ಕಾವಲು (3)

ಮೇಲಿಂದ ಕೆಳಕ್ಕೆ:

1. ಅಕ್ಕರೆಯ ಆರೈಕೆ ಒದಗಿಸಬೇಕೆಂದು ಪ್ರಾರ್ಥನೆ (3)
2. ಆ ವಿಚಿತ್ರ ಹೆಸರಿನ ಗುಟ್ಟೇನು ಗೊತ್ತೇ? (3)
3. ಮುಖವನ್ನೇ ಮಾರ್ಪಡಿಸುವ ಆಸೆ ಸರಿಯೇ? (3)
5. ಥರ ಥರ ನಡುಗಿಸಿದ್ದು ಇದೇ ಕುದುರೆ (3)
6. ಪರಿತಪಿಸುತ್ತ ನಿಂತ, ಪರಾಜಿತನಾದ (3)
8. ನಾಳಿನ ಪೂಜೆಗೆ ಸೂಕ್ತವಾದದ್ದು ತಾವರೆಯೇ ತಾನೇ? (3)
10. ಸಾಲ ಪಡೆದು ತಂದದ್ದಕ್ಕೆ ಸಂತಸದ ಮಾತುಕತೆ (3)
12. ಬೇವಿನ ಬೇರಿನಿಂದ ಮನೆಯೇ ತಲೆ ಕೆಳಗು (3)
13. ಪಟ್ಟಾಭಿರಾಮನನ್ನು ಸ್ಥಾಪಿಸಲು ಸುಂದರ ಚಪ್ಪರ (3)
14. ತೊರೆಯಲ್ಲಿ ಸಿಗುವಂಥದಲ್ಲ ಬಿಡಿ, ಕಮಲ (3)

## 19-12-13ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಮಾರೋಪ; 3. 'ನೆಲಲಾ' (ಲಾಲನೆ ಹಿಂದು ಮುಂದು); 4. ಟಾಕೀಸು; 6. ಕಿಚಾಯಿಸು; 7. ಪರಿಭವ; 8. ದೀನಜನ; 10. ರಘುಕುಲ; 12. ಅನುಕೂಲ; 14. ಮಾಘಮಾಸ; 16. 'ಳವಧ' (=ಧವಳ ಉಲ್ಟಾ); 17. ಹರಡು; 18. ವನಚರ.

ಮೇಲಿಂದ ಕೆಳಕ್ಕೆ:

1. ಸಲಾಕಿ; 2. ಪಟಾಸು; 3. ನೆರೆಭಯ; 5. ಸುಮನ; 7. ಪರಿವಾರ; 9. ನಡುಗಾಲ; 11. ಕುಕ್ಕುಳ (=ಕುದಿವ ಶಬ್ದ); 13. ಜೇನುಗೂಡು; 14. ಮಾಧವ; 15. ಸಹರ.

## ಪ್ರಶ್ನಾಂಕಣ

# ಮೃತ್ತಿಕೆಯ ಸೇನೆ-ಅದೇನು?

ವರ್ಷ 1974 ರಲ್ಲಿ, ಚೀನಾ ದೇಶದ 'ಮೌಂಟ್ ಲೀ' ಪರ್ವತ ಪ್ರದೇಶದಲ್ಲಿ, ನೆಲದಲ್ಲಿ ಹತ್ತಾರು ಅಡಿ ಆಳದಲ್ಲಿ, ಒಂದು ವಿಶಾಲ ಹಳ್ಳದಲ್ಲಿ ಹುದುಗಿ ಅಗೋಚರವಾಗಿ ಅಜ್ಞಾತವಾಗಿದ್ದ 'ಸೈನ್ಯ'ವೊಂದು ಪತ್ತೆಯಾಯಿತು. ಆ ಹಳ್ಳದಲ್ಲಿ ಹನ್ನೊಂದು ಸಮಾಂತರ ಸಾಲುಗಳಲ್ಲಿ ಸೈನಿಕ ಉಡುಪಿನಲ್ಲಿ ಸಜ್ಜಾಗಿ ನಿಂತಿದ್ದ ಯೋಧರ ಸಂಖ್ಯೆ ಆರು ಸಾವಿರ! ಪುರಾತತ್ವ ವಿಜ್ಞಾನಿಗಳು ಉತ್ಖನನ ಮಾಡಿದ, ಎರಡು ಸಾವಿರ ವರ್ಷ ಹಿಂದಿನ ಈ ಇಡೀ ಸೇನೆ- ಎಂದರೆ ಸೈನಿಕರು, ಕುದುರೆಗಳು, ರಥಗಳು, ಉಡುಪುಗಳು, ಶಸ್ತ್ರಾಸ್ತ್ರಗಳು ಇತ್ಯಾದಿ ಎಲ್ಲವೂ ಬರೀ ಮಣ್ಣಿನವು. ನೈಜ ಗಾತ್ರಗಳಲ್ಲೇ ಜೇಡಿಮಣ್ಣಿನಿಂದ ರೂಪಿಸಿ, ಸುಟ್ಟು ಗಟ್ಟಿಗೊಳಿಸಿ, ಮಣ್ಣಿನದೇ ಬಣ್ಣ ಪೂಸಿ ಅಣಿಗೊಳಿಸಿ ನಿಲ್ಲಿಸಲಾಗಿದ್ದ ಆ ಸಮರ ಸನ್ನದ್ಧ ದಂಡು 'ಮೃತ್ತಿಕೆಯ ಸೇನೆ' ಟೆರ್ರಾ ಕೋಟಾ ಆರ್ಮಿ) ಎಂದೇ ಈಗ ಜಗತ್ಪ್ರಸಿದ್ಧ (ಚಿತ್ರ ನೋಡಿ).

ಈ ಸೇನೆಯನ್ನು ನಿರ್ಮಿಸಿದ್ದು ಯಾರು? ಅದರ ಉದ್ದೇಶ ಏನು?

ಕ್ರಿ.ಪೂ. 246 ರಲ್ಲಿ ಆಗಿನ ಚೀನಾದ 'ಚಿನ್' ಪ್ರಾಂತ್ಯದ ಸಿಂಹಾಸನವನ್ನು ಹದಿಮೂರೇ ವರ್ಷ ಪ್ರಾಯದ 'ಚಿಂಗ್' ಎಂಬ ಅರಸ ಏರಿದ. ಕ್ರಿ.ಪೂ. 237 ರಿಂದ ಸ್ವತಂತ್ರ ಆಡಳಿತ ಕೈಗೊಂಡ ಚಿಂಗ್ ತನ್ನನ್ನು ಚಕ್ರವರ್ತಿ ಎಂದು ಘೋಷಿಸಿಕೊಂಡು ಹತ್ತು ಲಕ್ಷ ಸಂಖ್ಯೆಯ ಒಂದು ಸೇನೆ ಕಟ್ಟಿದ. ಇತಿಹಾಸಕಾರರು ವಿವರಿಸಿರುವಂತೆ 'ಸೀಳು ಗಣ್ಣಿನ, ಪಾರಿವಾಳ ವಕ್ಷದ, ತೋಳದ ಧ್ವನಿಯ, ಹುಲಿಯ ಹೃದಯದ' ಆ ಅರಸ ಹದಿನಾರು ವರ್ಷಗಳ



ಅವಧಿಯಲ್ಲಿ ಎಲ್ಲ ರಾಜರನ್ನೂ ಬಗ್ಗುಬಡಿದು ಇಡೀ ಚೀನಾದ ಚಕ್ರಾಧಿಪತಿ ಆದ; 'ಚಿನ್-ಶ್ವಿ-ಹ್ವಾಂಗ್-ಟಿ' ಆದ (ಎಂದರೆ 'ಪ್ರಪ್ರಥಮ ಚಕ್ರಾಧಿಪತಿ ಚಿನ್' ಆದ) ಜಗತ್ಪ್ರಸಿದ್ಧ 'ಚೀನಾದ ಮಹಾಗೋಡೆ'ಯನ್ನು ನಿರ್ಮಿಸಿದ್ದು ಇವನೇ.

ಇದೇ ಅರಸ ತಾನು ಮೃತನಾದ ನಂತರವೂ ಸಾರ್ವಭೌಮನಾಗಿಯೇ ಉಳಿವ ಕನಸು ಕಟ್ಟಿದ್ದ. ಸೇನಾ ಸಹಿತ ಭವ್ಯ ನಗರವೊಂದರಲ್ಲಿ ಸಮಾಧಿಗೊಂಡು ಅಮರನಾಗುವ ಆಸೆ ಹೊಂದಿದ್ದ. ತನ್ನ 'ಅಪರ ಸಾಮ್ರಾಜ್ಯ'ಕ್ಕಾಗಿ ಆತ ನಿರ್ಮಾಣ ಮಾಡಿಸಿದ ಮಹಾಸೇನೆಯೇ ಈ ಮೃತ್ತಿಕಾ ಸೇನೆ. ಆದರೆ ವಿಪರ್ಯಾಸ ಏನೆಂದರೆ ಆ ಕೆಲಸ ನಡೆಯುತ್ತಿದ್ದಾಗಲೇ ಚಕ್ರವರ್ತಿ ಚಿನ್ ತನ್ನ 49ನೇ ವಯಸ್ಸಿನಲ್ಲೇ ಸ್ವಾಭಾವಿಕವಾಗಿಯೇ ಮೃತನಾದ. ಸ್ವಾರ್ಥಿಯಾಗಿ, ಕ್ರೂರಿಯಾಗಿ, ನಿರ್ದಯಿಯಾಗಿ, ಹಾಗಾಗಿ ಕಿಂಚಿತ್ತೂ ಜನಪ್ರಿಯನಾಗಿಲ್ಲದಿದ್ದ ಆ ಅರಸನ ಶವವನ್ನು ಅವನ ಕೆಲ ನಿಷ್ಟ ಅನುಯಾಯಿಗಳು ರಹಸ್ಯವಾಗಿ ಹುಗಿದು ಈ ಸೇನೆಯನ್ನು ಕಾವಲಿಗಿಟ್ಟು ಮಣ್ಣು ಮುಚ್ಚಿದ್ದರು.

ಈಗ ಚೀನಾ ದೇಶದಲ್ಲಿನ ಒಂದು ಪ್ರಮುಖ ಪ್ರವಾಸೀ ಆಕರ್ಷಣೆ ಈ ಮೃತ್ತಿಕೆಯ ಸೇನೆ.

■ ಎನ್. ವಾಸುದೇವ್